1 ಮೆಟ್ರಿಕ್ ಪೂರ್ವ ಬಾಲಕರ ವಿ ನಿ	–	10
2 ಮೆಟ್ರಿಕ್ ಪೂರ್ವ ಬಾಲಕಿಯರ ವಿ ನಿ	–	03
		03

3 ಹಿಂದುಳಿದ ವರ್ಗಗಳ ಇಲಾಖೆ

– – –

4 ಅಲ್ಪಸಂಖ್ಯಾತರ ಇಲಾಖೆ

– – –

ಆ) 1 ಸಮಾಜ ಕಲ್ಯಾಣ ಇಲಾಖೆ

2002–03ನೇ ಸಾಲಿನ	–	51 ವಿ ನಿ ಗಳು
2003–04ನೇ ಸಾಲಿನ ಡಿಸೆಂಬರ್	–	44 ವಿ ನಿ ಗಳ ಕಟ್ಟಡಗಳನ್ನು ನಿರ್ಮಿಸಲಾಗಿದೆ
ಒಟ್ಟು		95

2 ಪರಿಶಿಷ್ಟ ವರ್ಗಗಳ ಇಲಾಖೆ

2002–03ನೇ ಸಾಲಿನಿಂದ ಇಲ್ಲಿಯವರೆಗೆ ಒಟ್ಟು 7 ವಿದ್ಯಾರ್ಥಿನಿಲಯಗಳ ಕಟ್ಟಡವನ್ನು ನಿರ್ಮಿಸಲಾಗಿದೆ

3 ಹಿಂದುಳಿದ ವರ್ಗಗಳ ಇಲಾಖೆ

– – –

4 ಅಲ್ಪಸಂಖ್ಯಾತರ ಇಲಾಖೆ

– – –

ಇ) ಸಮಾಜ ಕಲ್ಯಾಣ ಇಲಾಖಾವತಿಯಿಂದ ಶಿವಾಜಿನಗರ ವಿಧಾನ ಸಭಾ ಕ್ಷೇತ್ರದಲ್ಲಿ ಯಾವುದೇ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಿರುವುದಿಲ್ಲ

ರಾಜ್ಯದಲ್ಲಿ ಹೊಸ ಕೈಗಾರಿಕೆಗಳ ಸ್ಥಾಪನೆ

240 (86) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಂಖ್ಯೆ ಎಷ್ಟು

ಆ) ಇವುಗಳಲ್ಲಿ ಎಷ್ಟು ಸಾರ್ವಜನಿಕ ವಲಯಗಳಲ್ಲಿವೆ

ಇ) ಇವುಗಳಲ್ಲಿ ಸರ್ಕಾರ ತೊಡಗಿಸಿರುವ ಬಂಡಾವಾಳವೆಷ್ಟು

ಈ) ಇವುಗಳ ಪೈಕಿ ಎಷ್ಟು ಲಾಭದಲ್ಲಿ ನಡೆಯುತ್ತಿವೆ

ಉ) ಎಷ್ಟು ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ನಷ್ಟವನ್ನು ಅನುಭವಿಸುತ್ತಿವೆ ಹಾಗೂ ಮುಚ್ಚಲ್ಪಟ್ಟಿವೆ

ಊ) ರಾಜ್ಯದಲ್ಲಿ ಈ ಕೈಗಾರಿಕೆಗಳಲ್ಲಿ ಎಷ್ಟು ಜನ ಉದ್ಯೋಗಸ್ಥರಾಗಿದ್ದಾರೆ

ಋ) ರಾಜ್ಯದಲ್ಲಿ 2000 ದಿಂದ ಇಲ್ಲಿಯವರೆಗೆ ಪ್ರಾರಂಭಿಸಲಾದ ಹೊಸ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳೆಷ್ಟು ಹಾಗೂ ಸಾರ್ವಜನಿಕ ವಲಯದಲ್ಲಿ ಎಷ್ಟು ಕೈಗಾರಿಕೆಗಳನ್ನು ಪ್ರಾರಂಭಿಸಲಾಯಿತು?

ಋೂ) 2010 ರ ವೇಳೆಗೆ ದಶಲಕ್ಷ ಉದ್ಯೋಗಗಳನ್ನು ಸೃಷ್ಟಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಆರ್ ವಿ ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ರಾಜ್ಯದಲ್ಲಿ 1044 ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಘಟಕಗಳು ಸ್ಥಾಪನೆಗೊಂಡಿರುತ್ತವೆ

ಆ) 31-3-2002ರಲ್ಲಿದ್ದಂತೆ ಸಾರ್ವಜನಿಕ ವಲಯದಲ್ಲಿರುವ ಮಧ್ಯಮ ಮತ್ತು ಬೃಹತ್ ಕೈಗಾರಿಕೆಗಳು

1) ಮೈಸೂರ ಸಕ್ಕರೆ ಕಾರ್ಖಾನೆ ನಿಯಮಿತ
2) ಮೈಸೂರು ಕಾಗದ ಕಾರ್ಖಾನೆ ನಿಯಮಿತ
3) ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ನಿಯಮಿತ
4) ಹಟ್ಟಿ ಚಿನ್ನದ ಗಣಿ ನಿಯಮಿತ
5) ಮೈಸೂರು ಮಿನರಲ್ಸ್ ನಿಯಮಿತ
6) ಕರ್ನಾಟಕ ರಾಜ್ಯ ಆಗ್ರೋ ಕಾರನ್ ಪ್ರಾಡಕ್ಟ್ ನಿಯಮಿತ
7) ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ
8) ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ
9) ಕರ್ನಾಟಕ ರೇಷ್ಮೆ ಕೈಗಾರಿಕಾ ನಿಗಮ ನಿಯಮಿತ
10) ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ
11) ಎನ್ ಜಿ ಇ ಎಫ್ ಹುಬ್ಬಳ್ಳಿ ನಿಯಮಿತ
12) ಕರ್ನಾಟಕ ಟೆಲಿಕಾಂ ನಿಯಮಿತ
13) ಮೈಸೂರು ಅಸಿಟೇಟ್ ಮತ್ತು ಕೆಮಿಕಲ್ಸ್ ನಿ.
14) ಎನ್ ಜಿ ಎಫ್ ನಿಯಮಿತ ಬೆಂಗಳೂರು
15) ಕರ್ನಾಟಕ ರಾಜ್ಯ ಜವಳಿ ನಿಗಮ ನಿಯಮಿತ
16) ಮೈಸೂರು ಲ್ಯಾಂಪ್ ವರ್ಕ್ಸ ನಿಯಮಿತ
17) ಕರ್ನಾಟಕ ರಾಜ್ಯ ವೆನೀರ್ಸ ನಿಯಮಿತ
18) ವಿಜಯನಗರ ಸ್ಟೀಲ್ ನಿಯಮಿತ

ಇ) ಇವುಗಳಲ್ಲಿ ಸರ್ಕಾರ ತೊಡಗಿಸಿದ ಬಂಡವಾಳ ರೂ 56,202 69 ಲಕ್ಷಗಳು

ಈ) ಲಾಭಗಳಿಸಿದ ಉದ್ದಿಮೆಗಳ ಸಂಖ್ಯೆ 5
ಮುಚ್ಚಲ್ಪಟ್ಟಿರುವ ಉದ್ದಿಮೆಗಳ ಸಂಖ್ಯೆ – 8

ಉ) ನಷ್ಟದಲ್ಲಿರುವ ಉದ್ದಮೆಗಳ ಸಂಖ್ಯೆ-12

ಊ) 20158

(ಇವರ ಪೈಕಿ 4308 ಉದ್ಯೋಗಿಗಳನ್ನು ಸ್ವಯಂ ನಿವೃತ್ತಿ ರಿಟ್ರೆಂಚ್‌ಮೆಂಟ್ ಮೂಲಕ ಸೇವೆಯಿಂದ ಬಿಡುಗಡೆಗೊಳಿಸಲಾಗಿದೆ)

ಖ) ರಾಜ್ಯದಲ್ಲಿ ಜನವರಿ 2000 ದಿಂದ ಡಿಸೆಂಬರ್ 2003ರವರೆಗೆ ರಾಜ್ಯ ಮಟ್ಟದ ಏಕ ಗವಾಕ್ಷಿ ಸಮಿತಿಯು 610 ಯೋಜನೆಗಳಿಗೆ (ರೂ 50 00 ಕೋಟಿಗಳವರೆಗೆ) ರೂ 11037 12 ಕೋಟಿಗಳಿಗೆ ಅನುಮೋದನೆ ನೀಡಿದ್ದು ಇದರಲ್ಲಿ 120 ಕೈಗಾರಿಕೆಗಳು ರೂ 1637 72 ಕೋಟಿಗಳ ಬಂಡವಾಳ ಹೂಡಿ ಕಾರ್ಯಾರಂಭಗೊಂಡಿವೆ ಇದರಿಂದ 37290 ಜನರಿಗೆ ಉದ್ಯೋಗಾವಕಾಶ ನೀಡಲಾಗಿದೆ

ಉನ್ನತ ಮಟ್ಟದ ಸಮಿತಿಯು 140 ಯೋಜನೆಗಳಿಗೆ ರೂ 50 00 ಕೋಟಿಗಳಿಗೆ ಮೇಲ್ಪಟ್ಟು) ರೂ 55849-12 ಕೋಟಿಗಳಿಗೆ ಅನುಮೋದನೆ ನೀಡಿದ್ದು 18 ಕೈಗಾರಿಕೆಗಳು ರೂ 5043 57 ಕೋಟಿಗಳ ಬಂಡವಾಳ ಹೂಡಿ ಕಾರ್ಯಾರಂಭಗೊಂಡಿವೆ ಇದರಿಂದ 7960 ಜನರಿಗೆ ಉದ್ಯೋಗಾವಕಾಶ ನೀಡಲಾಗಿದೆ

ಗ) ರಾಜ್ಯ ಸರ್ಕಾರದ 2001-2006 ಕೈಗಾರಿಕಾ ನೀತಿಯ ಪ್ರಕಾರ ರಾಜ್ಯದಲ್ಲಿ ಸ್ಥಾಪನೆಗೊಳ್ಳುವ ಕೈಗಾರಿಕಗಳಿಗೆ ರಿಯಾಯಿತಿ ಮತ್ತು ಪ್ರೋತ್ಸಾಹಗಳನ್ನು ನೀಡಲಾಗುತ್ತಿದೆ ರಾಜ್ಯದಲ್ಲಿ ಪ್ರಾರಂಭಗೊಳ್ಳುತ್ತಿರುವ ಘಟಕಗಳ ಯೋಜನಾ 3 00 ಕೋಟಿಯಿಂದ 50 00 ಕೋಟಿಗಳವರೆಗೆ ಬಂಡವಾಳ ಹೂಡುವ ಘಟಕಗಳಿಗೆ ರಾಜ್ಯ ಮಟ್ಟದ ಏಕ ಗವಾಕ್ಷಿ ಸಮಿತಿ ಮುಖಾಂತರ ಮತ್ತು 50-00 ಕೋಟಿ ಮೇಲ್ಪಟ್ಟು ಬಂಡವಾಳ ಹೂಡುವ ಘಟಕಗಳಿಗೆ ಉನ್ನತ ಮಟ್ಟದ ಸಭೆಗಳಲ್ಲಿ ಅನುಮೋದನೆಗೊಳಿಸುವ ಕಾರ್ಯಕ್ರಮವು ಪ್ರಗತಿಯಲ್ಲಿದ್ದು ರಾಜ್ಯದಲ್ಲಿ ಬಂಡವಾಳ ಹೂಡಿಕೆಗೆ ಪ್ರೋತ್ಸಾಹದಾಯಕವಾಗಿರುತ್ತದೆ ಇದಲ್ಲದೆ ಕೈಗಾರಿಕಾ ಟೌನ್‌ಶಿಪ್ ಸ್ಥಾಪಿಸುವ ಯೋಜನೆಯು ಪ್ರಗತಿಯಲ್ಲಿರುತ್ತದೆ ರಾಜ್ಯದಲ್ಲಿ ಹೆಚ್ಚು ಬಂಡವಾಳ ಹೂಡಿಕೆಗೆ ಸಹಾಯಕವಾಗುವಂತೆ ಬಂಡವಾಳ ಹೂಡಿಕೆ ಸಮಾವೇಶಗಳನ್ನು ಹಮ್ಮಿಕೊಳ್ಳುತ್ತಿರುವುದೇ ಅಲ್ಲದೆ ಹೊರ ರಾಜ್ಯ ಹಾಗೂ ಇತರೆ ದೇಶಗಳಿಂದ ಬಂಡವಾಳ ಆಕರ್ಷಿಸುವ ಕಾರ್ಯಕ್ರಮಗಳನ್ನೂ ಸಹ ಹಮ್ಮಿಕೊಳ್ಳಲಾಗಿದೆ ಹಾಸನ ಜಿಲ್ಲೆಯಲ್ಲಿ ವಿಶೇಷ ಹಾಗೂ ಆರ್ಥಿಕ ವಲಯ ಹಾಗೂ ರಾಜ್ಯದಲ್ಲಿ 6 ಸ್ಥಳಗಳಲ್ಲಿ ಆಹಾರ ಸಂಸ್ಕರಣ ಪಾರ್ಕ್‌ಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಈ ರೀತಿಯ ಕಾರ್ಯಕ್ರಮಗಳಿಂದ ಸ್ಥಾಪಿಸಲ್ಪಡುತ್ತಿರುವ ಕೈಗಾರಿಕೆಗಳಿಂದ ರಾಜ್ಯದಲ್ಲಿ ಹೆಚ್ಚು ಹೆಚ್ಚು ಉದ್ಯೋಗಾವಕಾಶಗಳು ದೊರೆಯುತ್ತದೆ

ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳನ್ನು ಮುಚ್ಚುತ್ತಿರುವುದು

241 (45) ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ (ಬೈಲಹೊಂಗಲ) ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳನ್ನು ಮುಚ್ಚಬೇಕೆಂಬ ವಿಷಯ ಸರ್ಕಾರದ ಮುಂದೆ ಇದೆ ಅವುಗಳ ಹೆಸರು ಹಾಗೂ ವಿಳಾಸ ನೀಡುವುದು

ಆ) ಈ ಸಕ್ಕರೆ ಕಾರ್ಖಾನೆಗಳನ್ನು ಪುನರುಜ್ಜೀವನಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು

ಇ) ಈ ಮುಚ್ಚುವ ಸಕ್ಕರೆ ಕಾರ್ಖಾನೆಗಳಿಂದ ರೈತರಿಗೆ ಕಾರ್ಮಿಕರಿಗೆ ಹಾಗೂ ವಿವಿಧ ಬ್ಯಾಂಕುಗಳಿಗೆ ಎಷ್ಟು ಮೊತ್ತವನ್ನು ಕೊಡಬೇಕಾಗಿರುವುದು?